## ಪ್ರಧಾನ ಸಿವಿಲ್ ಜಡ್ಜ್ ವ ಪ್ರ.ದ.ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

**ಸಿ.ಸಿ.ನಂ.ಃ 611-2013**

ಸಿ.ಡಬ್ಲೂಃ2
ಪಿ.ಡಬ್ಲೂಃ1

| | | |
|---|---|---|
| ಸಾಕ್ಷಿದಾರರ ಹೆಸರು | : | ರಾಘವೇಂದ್ರ ರಾಮಕೃಷ್ಣ ಪಟಗಾರ |
| ತಂದೆಯಃಗಂಡನ ಹೆಸರು | : | ರಾಮಕೃಷ್ಣ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಚಾಲಕ- ಕೂಲಿಕೆಲಸ |
| ವಾಸ್ತವ್ಯ | : | ಹೆಗಡೆ ಮಾಸೂರುತಾಃಕುಮಟಾ |

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋದಿಸಲಾಯಿತು. ದಿನಾಂಕಃ 25-11-2015.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದ ಃ -

ಸಾಕ್ಷಿಯು ಗಟನಾ ಸ್ಥಳದ ಪಂಚನಾಮೆಯಲ್ಲಿ ಇರುವ ತನ್ನ ಸಹಿ ಗುರುತಿಸಿದ್ದರಿಂದ ಆ ಪಂಚನಾಮೆಯನ್ನು ನಿಪಿ 1 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ಆ ದಾಖಲೆಗೆ ಸಹಿಯನ್ನು ದಿನಾಂಕಃ 25-12-2012 ರಂದು ಸಂಜೆ 4-30 ರಿಂದ 5-45 ಗಂಟೆಯ ಅವಧಿಯಲ್ಲಿ ಕೆಲಸಮುಗಿಸಿ ನಾನು ನನ್ನ ಮನೆ ಕಡೆಗೆ ನಾಗದೇವಿ ರಸ್ತೆಯಲ್ಲಿ ಹೋಗುತ್ತಿದ್ದಾಗ ಪೊಲೀಸರು ಪಂಚನಾಮೆ ಮಾಡಿ ನನಗೆ ಸಹಿ ಹಾಕಲು ಹೇಳಿದ್ದರು ಆಗ ಹಾಕಿದ್ದೇನೆ ಆ ಸಮಯದಲ್ಲಿ ನನ್ನ ಜೊತೆ ಚಾಸಾ 3 ಕೂಡಾ ಹಾಜರಿದ್ದರು. ಯಾವ ವಿಚಾರದಲ್ಲಿ ಪೊಲೀಸರು ಆ ಪಂಚನಾಮೆ ಕ್ರಮ ಜರುಗಿಸಿದ್ದಾರೆ ಎಂದು ನನಗೆ ಗೊತ್ತಿಲ್ಲಾ.

(ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷಿ ಆದ ಕಾರಣ ಮಾನ್ಯ ಸ.ಸ.ಅ ರವರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲು ಃ ಮಾನ್ಯ ಸ.ಸ.ಅ ರವರಿಂದಃ

ಆರೋಪಿತರು ಚಾಸಾ 1 ರವರ ತಂಗಿಗೆ ಸರ್ಕಾರಿ ಕೆಲಸವನ್ನು ಒದಗಿಸಿಕೊಡುತ್ತೇನೆ ಎಂದು ಹೇಳಿ ಅವರಿಂದ ಹಣಪಡೆದುಕೊಂಡು ಸರ್ಕಾರಿ ಕೆಲಸವನ್ನು ಕೊಡಿಸುತ್ತೇನೆ ಎಂದು ಹೇಳಿ, ಕೆಲಸವನ್ನು ಕೊಡಿಸದೇ ಹಣವನ್ನು ಹಿಂತಿರುಗಿಸದೇ ಮೋಸಮಾಡಿದ ವಿಚಾರದಲ್ಲಿ ಈ ದಾಖಲೆಯನ್ನು ತಯಾರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ. ಆ ವಿಚಾರ ತಿಳಿದು ನಾನು ಆ ದಾಖಲೆಗೆ ಸಹಿ ಹಾಕಿದ್ದರೂ ಕೂಡಾ ಈಗ ಮಾಹಿತಿ ಇಲ್ಲಾ ಆರೋಪಿತರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲಾ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ;- ಪಾಟೀ ಸವಾಲು ಇರುವುದಿಲ್ಲವೆಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಜೆ.ಎಂ.ಎಫ್.ಸಿ. ಕುಮಟಾ.